ಆನಂದದ ಆಲ್ಬಂ
ವಿವಾಹ್!

ಸತಿ: ರೀ.. ತಿಂಡಿ ಏನು ಮಾಡಲಿ?
ಪತಿ: ಏನಾದರೂ ಮಾಡು
ಸತಿ: ರೀ.. ಒಂದು ಪ್ರಶ್ನೆ?
ಪತಿ: ಕೇಳು?
ಸತಿ: ಮೋದಿಜಿ ಒಂದೇ ದಿನದಲ್ಲಿ ಮೂರು ದೇಶ ಹೇಗೆ ಸುತ್ತುತ್ತಾರೆ?
ಪತಿ: ಹೆಂಡತಿ ಜತೆಲಿ ಇಲ್ಲ ಅಂದರೆ ಎಷ್ಟು ದೇಶ ಬೇಕಾದರೂ ಸುತ್ತಬಹುದು.

ಸತಿ-ಪತಿ ಕಿತಾಪತಿ

ಸತಿ: ರೀ.. ಏನ್ ಮಾಡ್ತಾ ಇದ್ದೀರಾ?
ಪತಿ: ನೊಣ ಹೊಡೀತಾ ಇದ್ದೀನಿ
ಸತಿ: ನೊಣಗಳು ಸಿಕ್ಕಿದ್ವಾ?
ಪತಿ: ಹೌದು 3ಗಂಡು, 2ಹೆಣ್ಣು ನೊಣ ಸಿಕ್ಕಿವೆ
ಸತಿ: ನೊಣ ಗಂಡು, ಹೆಣ್ಣು ಎಂದು ಹೇಗೆ ಹೇಳ್ತೀರಾ?
ಪತಿ: ಬಿಯರ್ ಬಾಟಲ್ ಮೇಲೆ ಕುಳಿತಿರೋದು ಗಂಡು,ಫೋನ್ ಮೇಲೆ ಕುಳಿತಿರೋದು ಹೆಣ್ಣು.

ಕರೋನಾದಿಂದ ಲವ್ ಬ್ರೇಕ್

ದೂರವಿದ್ದಷ್ಟು ಪ್ರೀತಿ ಜಾಸ್ತಿ ಆಗುತ್ತೆ ಅನ್ನುತ್ತಾರೆ. ಇಂದಿನ ಲೆಕ್ಕಕ್ಕೆ ಹೇಳುವುದಾರೆ ದೂರವಿದಷ್ಟು ಆರೋಗ್ಯಕ್ಕೆ ಒಳ್ಳೆಯದು. ಇದೇ ನೆಪಕ್ಕೆ ಬ್ರೇಕ್ ಅನ್ನು ಬ್ರೇಕಪ್ ಮಾಡ್ಕೊಬೇಡಿ ಅಷ್ಟೆ. ಇದು ಬ್ರೇಕಪ್ ಅಲ್ಲಾ, ಜಸ್ಟ್ ಪ್ರೀತಿಗೆ ಬ್ರೇಕ್ ಅಷ್ಟೆ.

● **ಮಧುಕುಮಾರ್ ಬಿಳಿಚೋಡು, ದಾವಣಗೆರೆ**

ಕೆಲದಿನಗಳಿಂದ ಬಹುತೇಕ ಯುವ ಪ್ರೇಮಿಗಳ ಮಧ್ಯೆ ಬ್ರೇಕ್ ಸರ್ವೆ ಸಾಮಾನ್ಯ ಅಂತೆ. ಲವ್‌ನಲ್ಲಿ ಬ್ರೇಕಪ್ ಕೇಳಿದಿವಿ ಆದರೆ, ಇದೇನೂ ಬ್ರೇಕ್ ಅಂತನಾ? ನನಗೂ ಮೊದಲು ಕೇಳಿದಾಗ ಹೀಗೆ ಅನಿಸ್ತು. ಆಮೇಲೆ ಒಂದಷ್ಟು ಪ್ರೇಮಿಗಳನ್ನು ಫೋನ್ ಮೂಲಕ ಸಂಪರ್ಕಿಸಿದಾಗ ಸದ್ಯಕ್ಕೆ ಲವ್‌ನಲ್ಲಿ ಬ್ರೇಕ್ ಯಾಕೆ ಎಂಬುದಕ್ಕೆ ಒಂದಷ್ಟು ಉತ್ತರ ಸಿಕ್ಕಿತು.

ಕಳೆದ ಡಿಸೆಂಬರ್ ತಿಂಗಳಿನಲ್ಲಿ ಕಾಣಿಸಿಕೊಂಡಿರುವ ಕರೋನಾ ವೈರಸ್ ಪ್ರಭಾವದಿಂದ ಸಾಕಷ್ಟು ಜನ ಭಯಬೀತರಾಗಿದ್ದರಂತೆ. ನಮ್ಮ ದೇಶಕ್ಕೆ ವೈರಸ್ ಹರಡಿ ಈ ಪಾಠಿ ಸಮಸ್ಯೆಯನ್ನು ಉಂಟು ಮಾಡುತ್ತದೆ ಎಂದು ಯಾರು ಭಾವಿಸಿರಲಿಲ್ಲ. ಆದರೆ ದೇಶದಲ್ಲಿ ಇತ್ತೀಚೆಗೆ ವೈರಸ್ ಕುರಿತಾದ ಸುದ್ದಿಗಳನ್ನು ನೋಡಿ ಪ್ರೇಮಿಗಳು ವಾರಕ್ಕೊಮ್ಮೆ ಜಾಲಿರೈಡ್, ಪಾರ್ಕ್, ಸಿನಿಮಾ, ಮಾಲ್, ಐಸ್‌ಕ್ರೀಂ, ಗೋಬಿ ಮತ್ತು ಪಾನಿಪೂರಿಯನ್ನು ಸಾಕಷ್ಟು ಮಿಸ್ ಮಾಡಿಕೊಂಡಿದ್ದಾರೆ.

ಕಾಳಜಿ ಒಳ್ಳೆಯದು

ನನ್ನ ಗೆಳೆಯನೊಬ್ಬನಿಗೆ ಪ್ರೇಯಸಿಯ ಜತೆ ಬೈಕ್‌ನಲ್ಲಿ ಸುತ್ತಾಟ ಎಂದರೆ ಎಲ್ಲಿಲ್ಲದ ಆಸೆ. ಇತ್ತೀಚೆಗೆ ಅವನಿಗೆ ಕಾಲ್ ಮಾಡಿದರೆ ಬರೀ ಬ್ಯುಸಿ. ಒಮ್ಮೆ ಮುಖ ಭೇಟಿಯಾಗಿ ಸಿಕ್ಕಾಗ ಹೇಳಿದ. ಇದೇನೂ ಕರ್ಮನೋ ಗೊತ್ತಿಲ್ಲ ಗೆಳೆಯ. ಕರೋನಾ ದೇಶಕ್ಕೆ ಎಂಟ್ರಿ ಕೊಟ್ಟಿದ್ದೇ ತಡ ಒಂದಿಷ್ಟು ಸಾಮಾಜಿಕ ಜಾಲಾತಾಣಗಳ ಗಾಳಿಸುದ್ದಿಯನ್ನು ನೋಡಿ ಸದ್ಯಕ್ಕೆ ನಮ್ಮ ಲವ್‌ನಲ್ಲಿ ಬ್ರೇಕ್ ಎಂದಳು. ಜಾಸ್ತಿ ಹಾರಾಡಿದ್ರೆ ಬ್ರೇಕಪ್ ಅಷ್ಟೇ ಎಂದು ಗದರಿದಳು ಎಂದು ಹೇಳಿದ. ಕೇಳಿ ನಗಬೇಕೋ ಅಥವಾ ಹುಡುಗಿಯ ಕಾಳಜಿಗೆ ಭೇಷ್ ಅನ್ನಬೇಕೋ ಒಂದು ತಿಳಿಯದೇ ಕಸಿವಿಸಿಗೊಂಡದಂತೂ ನಿಜ.

ತುಂಬ ಮಿಸ್ ಮಾಡಿಕೊಂಡ್ವಿ

ಲವ್ ಸಿನಿಮಾಗಳೆಂದರೆ ನಮಗೆ ಪ್ರಾಣ. ಅದರಲ್ಲಿ ಬರುವ ಪಾತ್ರಗಳ ಲೆಲ್ಲಾ ನಾವೇನೆ ಎಂದು ಸಿನಿಮಾವನ್ನು ನೋಡಿ ಎಂಜಾಯ್ ಮಾಡುತ್ತಿದ್ದೇವು. ಆದರೆ, ಕನ್ನಡ ಚಿತ್ರರಂಗದಲ್ಲಿ ಇತ್ತೀಚೆಗೆ ಬಿಡುಗಡೆಗೊಂಡು ಸದ್ದಿಲ್ಲದೆ ಮರೆಯಾದ ದಿಯಾ ಮತ್ತು ಲವ್ ಮೋಕ್‌ಟೇಲ್ ಸಿನಿಮಾಗಳನ್ನು ಥಿಯೇಟರ್‌ಗಳಲ್ಲಿ ನೋಡಲಾಗಲಿಲ್ಲ ಎಂಬ ನೋವು ಇನ್ನೂ ಕಾಡುತ್ತಿದೆ. ಒಬ್ಬಂಟಿಯಾಗಿ ಮನೆಯಲ್ಲಿ ನಾವೊಬ್ಬರೆ ನೋಡಿದ್ದಕ್ಕೆ ಸಾಕಷ್ಟು ಬೇಸರವಿದೆ. ಇದಕ್ಕೆಲ್ಲಾ ಕರೋನಾ ವೈರಸ್ ಕಾರಣ. ಇನ್ನು ಅದೇಷ್ಟು ದಿನ ನಮ್ಮನ್ನು ಮನೆ ಬಿಟ್ಟು ಆಚೆ ಹೋಗದಂತೆ ನರಳಾಡಿಸುತ್ತೋ ಈ ಕರೋನಾ ಎಂಬುದೆ ಗೊತ್ತಾಗುತ್ತಿಲ್ಲ.

ಆರೋಗ್ಯಕ್ಕಿಂತೇನೂ ದೊಡ್ಡದಲ್ಲ

ನಮಗೂ ಸುತ್ತಾಟ ಎಂದರೆ ಇಷ್ಟ , ಆದರೆ ಸಮಯ ಸಂದರ್ಭ ಸರಿಯಿಲ್ಲ. ಆರೋಗ್ಯ ಚೆನ್ನಾಗಿದ್ದರೆ ಮುಂದೆ ಸಾಕಷ್ಟು ಸಮಯವಿದೆ. ವೈರಸ್‌ಗೆ ಸೂಕ್ತ ಔಷಧ ಬೇರೆ ಇಲ್ಲ. ಹಾಗಾಗಿ ಮನೆ ಬಿಟ್ಟು ಸುತ್ತಾಡುವುದಕ್ಕೆ ಭಯವಾಗುತ್ತಿದೆ. ಆದರೂ ತೊಂದರೆಯಿಲ್ಲ ಮೊಬೈಲ್ ಇದೆಯೆಲ್ಲಾ. ಇದರಲ್ಲೆ ಸಾಕಷ್ಟು ಸಮಯ ಕಳೆಯುತ್ತಿದ್ದೇವೆ.

ಬ್ರೇಕ್ ಒಳ್ಳೆಯದೆ

ಇನ್ನು ಹುಡುಗರ ಪರಿಸ್ಥಿತಿಯಂತೂ ಹೇಳಲಾಗದ ಸ್ಥಿತಿ. ವಾರವಿಡೀ ಒಂದು ಲೆಕ್ಕವಾದರೆ ವಿಕೆಂಡ್‌ನಲ್ಲಿ ಲವರ್ ಜತೆ ಸಮಯ ಕಳೆದು ಬರುತ್ತಿದದ್ದು ಮನಸ್ಸಿಗೆ ಸಮಾಧಾನ ನೀಡುತ್ತಿತ್ತು. ಇಂದು ವಿಕೆಂಡ್‌ನಲ್ಲಿ ಕಾಲ್ ಮೆಸೇಜ್‌ಗಾಗಿ ಕಾದು ಕುಳಿತಿರುವ ಪರಿಸ್ಥಿತಿ ಬಂದಿದೆ. ನಮಗೂ ಇಂತ ಭಯಾನಕ ವೈರಸ್‌ಗಳ ಪ್ರಭಾವದಿಂದ ಇತ್ತೀಚೆಗೆ ಲವ್‌ನಲ್ಲಿ ಬ್ರೇಕ್ ಒಳ್ಳೆಯದೆ ಎನಿಸಿತು. ಒಂದಷ್ಟು ಕಾಯ ಯವಿಕೆಯಲ್ಲೆ ಸಮಯ ಮುಂದೂಡುತ್ತೇವೆ. ಸೂಕ್ತ ಸಮಯ ಬಂದಾಗ ಬ್ರೇಕ್‌ಗೆ ಬಾಯ್ ಬಾಯ್ ಹೇಳುತ್ತೇವೆ ಎನ್ನುತ್ತಾರೆ ಪ್ರೇಮಿಗಳು.



ಬೇಕು ಒಂದಿಷ್ಟು ಬ್ರೇಕ್

ಲವರ್‌ಸ್‌ಗಳು ತೆಗೆದುಕೊಂಡಿರುವ ನಿರ್ಧಾರ ಸರಿ ಎನಿಸಿತು. ಜಗತ್ತಿನಾದ್ಯಂತ ಕರೋನಾ ವೈರಸ್‌ಗೆ ಹತ್ತು ಸಾವಿರ ಮಂದಿ ಹಸುನೀಗಿದ್ದಾರೆ. ವೈರಸ್‌ನಿಂದ ಚೇತರಿಸಿಕೊಂಡು ಗುಣಮುಖ ರಾಗುವವರ ಸಂಖ್ಯೆ ಮಂದಗತಿಯಲ್ಲಿದೆ. ಇನ್ನು ದಿನದಿಂದ ದಿನಕ್ಕೆ ವೈರಸ್ ಮತ್ತೊಬ್ಬರಲ್ಲಿ ಸೇರಿಕೊಳ್ಳುತ್ತಿರುವುದು ಗಣನೀಯವಾಗಿ ಹೆಚ್ಚಾಗುತ್ತಿದೆ. ಸೂಕ್ತ ಔಷಧವನ್ನು ಸಂಶೋಧಿಸುವಲ್ಲಿ ವಿಜ್ಞಾನ-ತಂತ್ರಜ್ಞಾನ ಜಗತ್ತಿನಾದ್ಯಂತ ಪೈಪೋಟಿ ನಡೆಸುತ್ತಿದೆ. ಇಂತಹ ಸಂದರ್ಭದಲ್ಲಿ ಎಲ್ಲ ವಿಚಾರಗಳಲ್ಲಿ ಒಂದಷ್ಟು ಬ್ರೇಕ್ ಒಳ್ಳೆಯದೇ.



ನನ್ನ ಫುಲ್ ಟೈಮ್ ನಿದಿಮಾ ನೀನು

● **ಪವನ್ ಕುಮಾರ್.ಎಂ ರಿಪ್ಪನ್‌ಪೇಟೆ**

ಸಿನಿಮಾಗಳು ಕೇವಲ ಸಿನಿಮಾಗಳು ಮಾತ್ರವಲ್ಲ. ಅವು ನೈಜತೆಯ ಪ್ರತೀಕ. ನಮ್ಮ ದೈನಂದಿನ ಬದುಕಿನಲ್ಲಿ ನಡೆಯುವಂತದನ್ನು ಪರದೆ ಮೇಲೆ ನೋಡುತ್ತೇವೆ ಅಷ್ಟೆ. ಒಂದಲ್ಲಾ ಒಂದು ಸಿನಿಮಾಗಳು ನಮ್ಮ ಬದುಕನ್ನು ಹೋಲುತ್ತವೆ. ಪಾತ್ರಗಳ ಒಳಗೆ ನಾವು ಇಳಿದಾಗ ನಮ್ಮ ಜೀವನದಲ್ಲೂ ಅವುಗಳ ಅನುಭವ ಆಗಿರುವುದು ಗೊತ್ತಾಗುತ್ತದೆ. ಅದರಲ್ಲಿ ಒಂದಿಷ್ಟು ಪಾತ್ರಗಳು ನಮಗೆ ಇಷ್ಟವಾಗಿ ಅವುಗಳನ್ನ ಬಯಸುತ್ತೇವೆ. ಅಂತಹದ್ದೇ ಒಂದು ಪಾತ್ರ ನನ್ನ ಮನ ಕಾಡಿದ ಪಾತ್ರವಾಗಿದೆ ಅದುವೇ ನಿದಿಮಾ ಪಾತ್ರ.

ಕಳೆದ ಕೆಲ ದಿನಗಳಿಂದ ಯಾರ ಬಾಯಲ್ಲಿ ನೋಡಿದರೂ ದಿಯಾ ಹಾಗೂ ಲವ್ ಮೋಕ್‌ಟೇಲ್ ಸಿನಿಮಾದ್ದೆ ಮಾತು. ಇವೆರೆಡೂ ಸಿನಿಮಾಗಳು ಯುವ ಜನತೆಯ ಮನ ತಟ್ಟುವಂತೆ ಮಾಡಿವೆ. ಯಾರ ವಾಟ್ಸಾಪ್ ಸ್ಟೇಟಸ್ ನೋಡಿದರೂ ಈ ಎರಡು ಸಿನಿಮಾಗಳದ್ದೆ ಕಾರುಬಾರು. ಈ ಸಿನಿಮಾದ ಪಾತ್ರಗಳು ಸಕತ್ ಫೇಮಸ್ ಆಗಿದ್ದು ಸಿನಿಮಾದ ಭಾವನೆಗಳು ಯುವಕರ ಹೃದಯ ಮಿಡಿಯುವಂತೆ ಮಾಡಿವೆ. ಅದರಲ್ಲೂ ನಿದಿಮಾ ಪಾತ್ರ ಸಕತ್ ಫೇಮಸ್ ಆಗಿದ್ದು ಸಿಕ್ಕರೆ ನಿದಿಮಾ ತರ ಹುಡುಗಿ ಸಿಗ್ಲಿ ಎಂದು ಹೇಳುತ್ತಿದ್ದಾರೆ.

ಅಂದಹಾಗೆ ಈ ಪ್ರೀತಿ ಅನ್ನೋದು ಯಾರಿಗೆ, ಯಾವಾಗ, ಹೇಗೆ, ಯಾಕೆ ಆಗುತ್ತೆ ಅಂತಾನೆ ಹೇಳೋದು ಕಷ್ಟ. ಎಲ್ಲೋ ಇದ್ದ ಅಪರಿಚಿತರು ಪರಿಚಿತರಾಗಿ, ಆ ಪರಿಚಯದಿಂದ ಒಬ್ಬರನೊಬ್ಬರು ಸರಿಯಾಗಿ ಅರ್ಥ ಮಾಡಿಕೊಂಡು ಇಬ್ಬರ ಭಾವನೆಗಳಿಗೂ ಸ್ಪಂದಿಸಿದರೆ ಸಾಕು ಪ್ರೀತಿ ಹುಟ್ಟುತ್ತದೆ. ನನ್ನ ಪ್ರಕಾರ ಹುಡುಗ ಹುಡುಗಿ ಮಧ್ಯೆ ಬೆಸ್ಟ್ ಫ್ರೆಂಡ್ ಶಿಪ್ ಅಂತಾ ಏನಾದ್ರೂ ಇದ್ರೆ ಅದು ಅವ್ರಿಗೆ ಗೊತ್ತಿಲ್ಲದಂತೆ ಪ್ರೀತಿ ಎಂಬ ಮೊಳಕೆ ಚಿಗುರೊಡೆದಿರುತ್ತದೆ. ಅದರಲ್ಲಿ ಎಷ್ಟೋ ಹೇಳಿ ಕೊಂಡು ಒಪ್ಪಿಗೆ ಸೂಚಿಸಿದರೆ ಇನ್ನೆಷ್ಟೋ ಜೋಡಿಗಳಿಗೆ ಹೇಳಿದರೆ ಎಲ್ಲಿ ಗೆಳತನ ಕಟ್ ಆಗುತ್ತೋ ಅಂತಾ ಭಯಕ್ಕೆ ಹೇಳಿಕೊಳ್ಳಲು ಆಗದೆ ಅವರೊಂದಿಗೆ ಮಣ್ಣು ಸೇರುತ್ತಿವೆ.

ಇಷ್ಟೆಲ್ಲಾ ನಡೆಯುವುದರ ಒಳಗಾಗಿ ನಮ್ಮ ಲೈಫು 'ದಿಯಾ' ತರ ಶುರುವಾಗಿ 'ಸಿಂಪಲ್ಲಾಗ್ ಒಂದ್ ಲವ್ ಸ್ಟೋರಿ' ತರ ನಡೆದುಕೊಂಡು ಹೋಗಿ 'ಅಂಬಾರಿ' ತರ ನಂಬಿಕೆ ಇಟ್ಟುಕೊಂಡು, 'ಅಮೃತ ವರ್ಷಿಣಿ' ತರ ಕನಸು ಕಟ್ಟಿಕೊಂಡು 'ಲವ್ ಮೋಕ್‌ಟೇಲ್' ತರ ಬದುಕನ್ನ ಎಂಜಾಯ್ ಮಾಡಲು ಕನಸು ಕಟ್ಟಿರುತ್ತೇವೆ. ಈ ಕನಸುಗಳು ಅದೆಷ್ಟು ನೆರವೇರುತ್ತವೋ ಗೊತ್ತಿಲ್ಲ ಆದರೆ ಆ ಕನಸಿಗೆ ನಮ್ಮವರು ಸದಾ ಜತೆಗಿದ್ದರೆ ಮಾತ್ರ ಪ್ರಪಂಚದಲ್ಲಿ ಲಕ್ಕಿ ಪರ್ಸನ್ ಯಾರು ಇಲ್ಲ ಅಂತಾ ಅನ್ನಿಸುತ್ತೆ. ನಾವು ಅಂದು ಕೊಂಡದ್ದು ಸಿಕ್ಕರೆ ಸಾಕು ಅದರಷ್ಟು ಖುಷಿ ಬೇರಾವುದೂ ಇಲ್ಲ ಅಂತಾ ಅನ್ಸುತ್ತೆ. ಆ ಕ್ಷಣ ಲೈಫ್ ಕಲರ್ ಫುಲ್ ಅನ್ಸುತ್ತೆ.

ನಾವಿಬ್ರೂ ಯಾವಾಗ್ಲೂ ಆದಿ ಮತ್ತೆ ನಿದಿಮಾ ತರ ಲೈಫ್ ಲೀಡ್ ಮಾಡ್ಬೇಕು ಅಂತ ಇಷ್ಟ. ನಮ್ಮ ಪೆದ್ದು ಮುದ್ದು ಜೋಡಿ ನೋಡಿ ಆ ದೇವರಿಗೂ ಹೊಟ್ಟೆಕಿಚ್ಚು ಬರಬೇಕು ಯಾಕಾದ್ರೂ ಇವರಿಬ್ರನ್ನು ಒಂದು ಮಾಡಿದ್ನೊ ಅಂತ. ನನ್ನ ಲೈಫ್ ಕೂಡಾ ಲವ್ ಮೋಕ್ ಟೇಲ್ ಸಿನಿಮಾ ತರಾನೆ ಆಗಿಬಿಟ್ಟಿದೆ. ಎಷ್ಟೇ ಜಗಳ ಮಾಡಿಕೊಂಡರು ಒಬ್ಬರನೊಬ್ಬರು ಅರ್ಥ ಮಾಡಿಕೊಂಡು ಹೊಂದಾಣಿಕೊಂಡು ಹೋಗುತ್ತಿದ್ದೇವೆ. ಆದರೆ ಒಂದು ಕಂಡೀಷನ್ ನಿದಿಮಾ ತರ ನೀನು ನನ್ನ ಲೈಫಲ್ಲಿ ಲೈಫ್ ಟೈಮ್ ಇರಬೇಕು. ಇಬ್ಬರೂ ಹಾಗೆ ಇರೋಣ ಅಲ್ವಾ.

ಕನಸು ನನಸಾಗಿಸಲು ಹೆಣಗಾಡುವವಳು ಹೆಣ್ಣು

● **ಶ್ರೀರಕ್ಷಾ ರಾವ್,ಪುನರೂರು**

ಹೆಣ್ಣು ಹಾಗೂ ಹೆಣ್ಣಿನ ಜೀವನವೇ ಒಂದು ರೀತಿಯ ಸೋಜಿಗ. ಯಾರದೋ ಮನೆಯಲ್ಲಿ ಹುಟ್ಟಿ ಇನ್ಯಾರದೋ ಮನೆಯನ್ನು ಸೇರಿ ಅವರ ಆಸೆ ಕನಸುಗಳನ್ನು ನನಸಾಗಿಸಲು ಸದಾ ಹೆಣಗುವವಳು ಹೆಣ್ಣು. ಆದರೆ ಹೆಣ್ತನದ ಪ್ರತಿಯೊಂದು ಘಟ್ಟ ನನ್ನ ಬದುಕಲ್ಲಿ ನನ್ನನ್ನು ಹಿಗ್ಗಿಸಿತು ಕುಗ್ಗಿಸಿತು ಎನ್ನುವುದಕ್ಕಿಂತ ಜೀವನದ ನಿಜವಾದ ಅರ್ಥವನ್ನು ತಿಳಿಸಿತು. ಜೀವನ ಎಂದರೆ ಹೂವಿನ ಮೇಲೆ ನಡೆದಷ್ಟು ಮೃದು ಎಂದು ತಿಳಿದಿದ್ದ ನನ್ನ ಬುದ್ಧಿಗೆ, ನೀನು ಪೆದ್ದಿ ಎಂದು ತಿಳಿಯಲು ಹೆಚ್ಚಿನ ಸಮಯ ಏನು ತೆಗೆದುಕೊಳ್ಳಲಿಲ್ಲ. ಜೀವನದ ನಿಜವಾದ ಸತ್ಯವನ್ನು ನನ್ನ ಪೆದ್ದು ತನವನ್ನು ದೂರ ಮಾಡಿದ ನನ್ನ ಜೀವನದ ಅತ್ಯಂತ ಮುಖ್ಯ ಘಟ್ಟ ಎಂದರೆ ಅದು ಮದುವೆ.

ಬೆಟ್ಟದಷ್ಟು ದೊಡ್ಡ ಜವಬ್ದಾರಿ

ಮದುವೆ ಎಂಬ ಮೂರಕ್ಷರಕ್ಕೆ ನನ್ನದೇ ಆದ ಕಲ್ಪನೆಯ ರೆಕ್ಕೆ ಕಟ್ಟಿ ಎಷ್ಟು ಸಾಧ್ಯವೋ ಅಷ್ಟು ಎತ್ತರಕ್ಕೆ ಯಾರ ಹಂಗಿಲ್ಲದೆ ವಿಹರಿಸುತ್ತಿದ್ದೆ. ಈ ಮದುವೆ ಎಂಬ ಮೂರಕ್ಷರದ ಕಲ್ಪನೆಯ ರೆಕ್ಕೆಗೂ ಜೀವ ಬರಲು ಹೆಚ್ಚಿನ ಸಮಯ ಬೇಕಾಗಿರಲಿಲ್ಲ. ಆ ದಿನವೂ ಬಂದೇ ಬಿಟ್ಟಿತು. ಇಂದಿಗೂ ನೆನಪಿದೆ ನಿಶ್ಚಿತಾರ್ಥವಾದ ನಂತರ ನನ್ನವನ ಹಾಗೂ ನನ್ನ ಜೀವನದ ಬಗ್ಗೆ ಕಂಡ ಕನಸ್ಸುಗಳು. ಅದರಿಂದಾಗುತ್ತಿದ್ದ ಪುಳಕ ಎಷ್ಟು ಚೆಂದಾ. ಇದೆಲ್ಲವೂ ನಿಜವಾಗುವ ದಿನ ಬಂದೇ ಬಿಟ್ಟಿತು ನನ್ನ ಮದುವೆ ನನ್ನವನ ಜತೆ ಆಗಿಯೇ ಹೋಯಿತು. ಚಿಕ್ಕ ಪ್ರಾಯ ಆದರೆ ನನಗಿದ್ದ ಜವಬ್ದಾರಿ ಬೆಟ್ಟದಷ್ಟು ದೊಡ್ಡದು. ಇಷ್ಟು ದಿನ ಕೇವಲ ನನ್ನ ಆಸೆ ಆಕ್ಷಾಂಶೆಗಳ ಬಗ್ಗೆ ಗಮನ ಹರಿಸುತ್ತಿದ್ದವಳಿಗೆ ಈಗ ನನ್ನ ಆಸೆಗಳಿಗಿಂತ ನನ್ನವರ ಆಸೆಯನ್ನು ನೆರವೇರಿಸುವುದೇ ಮುಖ್ಯವೆಂದು ಅನ್ನಿಸತೊಡಗಿತು.

ವಿಶ್ರಾಂತಿಬೇಕೆಂಬ ಹಂಬಲ

ಇದೆಲ್ಲದರ ನಡುವೆ ಯಾವ ಮದುವೆ ಬಗ್ಗೆ ಕನಸು ಕಂಡಾಗ ಪುಳಕಗೊಳ್ಳುತ್ತಿದ್ದೆನೋ ಅದು ನಾನೇನಾ ಎಂದು ಒಪ್ಪಿಕೊಳ್ಳಲು ಮನಸ್ಸಿಗೆ ಹಿಂಸೆಯಾಗುತ್ತಿತ್ತು. ನನ್ನ ಬಗ್ಗೆ ಯಾರೆ ಒಬ್ಬರು ಮೆಚ್ಚುಗೆಯ ಮಾತಾಡಿದರು ಆ ದಿನದ ಎಲ್ಲ ಆಯಾಸ ದೂರವಾಗಿ ಮುಖದಲ್ಲಿ ಮಂದಹಾಸ ಮೂಡುತ್ತಿತ್ತು.

ಇದೆಲ್ಲದರ ನಡುವೆ ನನ್ನ ಆಸೆ ಕನಸುಗಳು ಗಾಳಿಗೆ ಅದಾಗಲೆ ತೂರಿಹೋಗಿದ್ದವು. ಮೊದಲೆಲ್ಲಾ ಅರಳು ಹುರಿದಂತೆ ಸದಾ ಮಾತನಾಡುತ್ತಿದ್ದ ನನ್ನ ನಾಲಿಗೆ, ನಿಂತಲ್ಲಿ ನಿಲ್ಲಲ್ಲು ಕೇಳದೆ ಸದಾ ಓಡಾಡುತ್ತಿದ್ದ ನನ್ನ ಕಾಲು, ನನ್ನ ಮಾತನ್ನೇ ಕೇಳದೇ ಒಂದಿಲ್ಲೊಂದು ಕೆಲಸಮಾಡುತ್ತಿದ್ದ ನನ್ನ ಕೈ ವಿಶ್ರಾಂತಿಗಾಗಿ ಹಾತೊರೆಯುತ್ತಿತ್ತು.

ತಾಯಿ ಪಾತ್ರ, ಕಠಿಣ

ಬರುತ್ತಾ ಬರುತ್ತಾ ನನ್ನ ದೇಹ ನನಗೆ ಭಾರವಾಗಲು ಪ್ರಾರಂಭವಾಯಿತು. ನನ್ನಲ್ಲಿ ನನ್ನದೇ ಕುಡಿ ಚಿಗುರೊಡೆದು ನನ್ನ ಜವಬ್ದಾರಿಯನ್ನು ಇನ್ನಷ್ಟು ಹೆಚ್ಚಿಸಿತು. ಪ್ರಪಂಚದ ಬಗ್ಗೆ ನನಗೆ ಏನು ಪರಿಚಯವಿಲ್ಲದಿರುವಾಗ ಈ ಮಗುವನ್ನು ಪರಿಚಯಿಸುವುದಾದರು ಹೇಗೆ ಎನ್ನುವ ದಿಗಿಲು ಮನದ ಮೂಲೆಯಲ್ಲಿ ಕೊರೆಯುತ್ತಲೇ ಇತ್ತು. ಆದರೆ ಯಾರ ಬಳಿ ಹೇಳಲಿ ಎಲ್ಲರಿಗೂ ಆಗ ನಾನೊಬ್ಬಳು ದೇವತೆಯಾಗಿದ್ದೆ. ಅಂತೂ ನನ್ನ ಕೂಸು ನನ್ನ ಮಡಿಲು ತುಂಬಿದ್ದ. ಮಗಳಾಗಿ, ಹೆಂಡತಿಯಾಗಿ, ಸೊಸೆಯಾಗಿ ಪಾತ್ರನಿರ್ವಹಿಸಿದಕ್ಕಿಂತಲೂ ತಾಯಿಯ ಪಾತ್ರ ನಿರ್ವಹಿಸುವುದು ಯಾಕೋ ತುಸು ಕಠಿಣವಾಗತೊಡಗಿತು.

ಆದರೆ ಎಲ್ಲ ಪಾತ್ರವನ್ನು ನೆರವೇರಿಸುವಂತಹ ಧೈರ್ಯ, ಮನೋಸ್ಥೈರ್ಯವನ್ನು ಹೆಣ್ಣಿಗೆ ಹುಟ್ಟಿನಿಂದಲೇ ದೈವದತ್ತವಾಗಿ ನೀಡಿದ ದೇವರಿಗೆ ಧನ್ಯವಾದ ಹೇಳದೆ ಇರಲಾರೆ.

ಹುಟ್ಟಿನಿಂದಲೂ ಬದಲಾವಣೆಗೆ ಹೊಸತನಕ್ಕೆ ತೆರೆದುಕೊಳ್ಳುವ ಹೆಣ್ಣಿಗೆ ಮದುವೆ ಎಂಬುದು ಜೀವನದ ಅತ್ಯಂತ ಪ್ರಮುಖ ಘಟ್ಟ. ಹಾಗೂ ಮದುವೆ ಎಂಬ ಪರ್ವ ಕಾಲ ಹೊಸ ಸಂಬಂಧಗಳ ನಾಂದಿ ಕಾಲ. ಅನೇಕ ಜವಬ್ದಾರಿ, ಸಂಬಂಧಗಳ ತೇರನ್ನು ಎಳೆಯುವ ಹೆಣ್ಣು ಧೈರ್ಯಲಕ್ಷ್ಮಿಯಾಗಲೇ ಬೇಕಾದ ಅನಿವಾರ್ಯವಿದೆ.

ಮೈ ಬಣ್ಣದಿಂದ ಗುಣ ಅಳೆಯದಿರಿ

● **ಸರಸ್ವತಿ ವಿಶ್ವನಾಥ್‌ಪಾಟೀಲ್,ಕಾರಟಗಿ**

ಸೌಮ್ಯ ಸ್ವಭಾವವು ಶಾಂತಿಯ ಸಂಕೇತ. ಬಹುಪಾಲು ಜನರನ್ನು ಸೌಂದರ್ಯ ಮತ್ತು ಹಣ ಆಕರ್ಷಿಸಿದರೆ ಅದು ದುರಾಸೆಯ ವರ್ತಮಾನ ಎಂದರೆ ತಪ್ಪಾಗಲಾರದು. ರೂಪವು ಮೋಹಕ್ಕೆ ಗುರಿಯಾದರೆ ಹಣವು ಭೋಗಕ್ಕೆ ಬೇಕಾಗುವ ಮೂಲವಸ್ತು. ಹಣ ಮತ್ತು ರೂಪ ಇವೆರಡರಿಂದ ಬದುಕು ಪರಿಪೂರ್ಣ ಆಗುವುದಿಲ್ಲ ಮತ್ತು ಮನಸಿಗೆ ಬೇಕಾಗುವ ಸಂತೋಷವನ್ನು ಒದಗಿಸುವುದಿಲ್ಲ. ಇವೆರಡು ಬದುಕಲಿ ಎದ್ದು ಕಾಣುವ ಕ್ಷಣಿಕ ಸುಖದ ಮೂಲಗಳು. ಆದರೆ ಸೌಮ್ಯ ಸ್ವಭಾವವು ಮನಸಿಗೆ ನೆಮ್ಮದಿಯನ್ನು ನೀಡಿ ಹೊಂದಾಣಿಕೆಯಲ್ಲಿ ಹೊನ್ನ ಸಂಪಾದಿಸುತ್ತದೆ.

ಹಣ ಭೋಗಕ್ಕೆ ನಾಂದಿ ಹಾಡಿ ಬದುಕಿಗೆ ಭದ್ರ ಬುನಾದಿ ಹಾಕುತ್ತದೆ. ಬಾಹ್ಯ ಸೌಂದರ್ಯಕ್ಕಿಂತ ಆಂತರಿಕ ಸೌಂದರ್ಯ ಮುಖ್ಯ. ಉತ್ತಮ ಬಟ್ಟೆ ಧರಿಸಿ ಸುಂದರವಾಗಿ ಕಂಡರೆ ಸಾಲದು ಉತ್ತಮವಾಗಿ ಜೀವಿಸುವುದನ್ನೂ ಕಲಿಯಬೇಕು. ಅಂತರಂಗದ ಸೌಂದರ್ಯ ಹೆಚ್ಚಿಸಿಕೊಳ್ಳಬೇಕು. ಸತ್ಯ, ಕರುಣೆ, ಅಂತಃಕರುಣೆ, ಪ್ರೀತಿ ಎಂಬ ಗುಣಗಳನ್ನು ಮೈಗೂಡಿಸಿಕೊಳ್ಳಬೇಕು. ನಡೆ ನುಡಿಯ ಸಾಮರಸ್ಯವೇ ನಿಜವಾದ ಧರ್ಮ. ಆಂತರಿಕ ಸೌಂದರ್ಯ ಗುರುತಿಸುವುದು ಸ್ವಲ್ಪ ಕಷ್ಟದ ಕೆಲಸ. ಅದನ್ನು ಅರ್ಥ ಮಾಡಿಕೊಳ್ಳಲು ಸಲ್ಪ ಸಮಯ ಬೇಕು. ಬಾಹ್ಯ ಸೌಂದರ್ಯದ ತರಹ ಕ್ಷಣ ಮಾತ್ರದಲ್ಲಿ ನಿರ್ಧರಿಸುವಂಥದ್ದಲ್ಲ ಆಂತರಿಕ ಸೌಂದರ್ಯ. ಆದರೆ ಹೆಚ್ಚಾಗಿ ಇದು ಜನರ ನೋಟದಲ್ಲಿ, ಅವರ ಭಾವದಲ್ಲಿ, ಮಾತಿನಲ್ಲಿ ಮತ್ತು ಅವರು ಮಾಡುವ ಕಾರ್ಯದಲ್ಲಿ ನಮಗೆ ಗೊತ್ತಾಗುತ್ತದೆ.

ಒಂದು ಹುಡುಗಿ ಸುಂದರವಾಗಿದ್ದಾಳೋ ಇಲ್ಲವೋ ಎಂದು ನಿರ್ಣಯ ಮಾಡಲು ಉಪಯೋಗಿಸುವ ಮೊಟ್ಟ ಮೊದಲ ಪ್ಯಾರಾಮೀಟರ್ ಆಕೆಯ ಮೈಬಣ್ಣ. ಆಕೆ ಬೆಳ್ಳಗಿದ್ದಾಳೆ ಎಂದಾಕ್ಷಣ ಸೌಂದರ್ಯದ ಪರೀಕ್ಷೆಯಲ್ಲಿ ಬಹುತೇಕ ಪಾಸ್. ಅದೇ ಕಪ್ಪಾಗಿದ್ದಾಳೆ ಎಂದಾಕ್ಷಣ ಆಕೆ ಎಷ್ಟೇ ಲಕ್ಷಣವಾಗಿರಲಿ ಅದು ಲೆಕ್ಕಕ್ಕೇ ಬರುವುದಿಲ್ಲ. ಒಬ್ಬ ಹೆಣ್ಣು ಬೆಳ್ಳಗಿದ್ದರೆ ಮಾತ್ರ ಸುಂದರಿ ಎಂದು ಯಾವ ಆಧಾರದ ಮೇಲೆ ನಿರ್ಣಯಿಸುವಿರಿ.

ಮಗುವಿನ ದೃಷ್ಟಿಯಲ್ಲಿ ಸೌಂದರ್ಯದ ಪರಿಕಲ್ಪನೆ ಹೇಗಿರುತ್ತದೆ ಎಂದರೆ, ಯಾರು ತಮ್ಮನ್ನು ಹೆಚ್ಚು ಪ್ರೀತಿಸುತ್ತಾರೋ ಅವರನ್ನು ಹೆಚ್ಚು ಇಷ್ಟಪಡುತ್ತದೆಯೇ ವಿನಹ ಯಾರು ಹೆಚ್ಚು ಬೆಳ್ಳಗಿದ್ದಾರೆ ಎಂದು ನೋಡುವುದಿಲ್ಲ. ರೂಪ ಎನ್ನುವುದು ಯವ್ವನದಲ್ಲಿ ಅಂದವಾಗಿ ಕಂಡರೆ, ಮೋಹಿಸುವ ತನಕ ಸುಖ ನೀಡುತ್ತದೆ. ಆದರೆ ಸೌಮ್ಯ ಸ್ವಭಾವವು ಜೀವನದ ಕೊನೆತನಕ ಜತೆಯಿದ್ದು ಪ್ರತಿಯೊಂದು ಹಂತದಲ್ಲು ಧನಾತ್ಮಕವಾಗಿ ಸ್ಪಂದಿಸುತ್ತದೆ. ಆದರೆ ಸೌಮ್ಯ ಸ್ವಭಾವವು ಎಂದು ಮಾಸದ ಆಗಸದಂತಿರುತ್ತದೆ. ಬಾಹ್ಯ ಅಂದವು ಸೌಂದರ್ಯ ಎನಿಸಿಕೊಂಡರೆ ಆಂತರಿಕ ಸೌಂದರ್ಯವು ಒಳ್ಳೆತನವೆನಿಸಿಕೊಳ್ಳುತ್ತದೆ. ಬಾಹ್ಯ ಸೌಂದರ್ಯವು ಕ್ಷೀಣಿಸಬಹುದು ಆದರೆ ಆಂತರಿಕ ಸೌಂದರ್ಯವು ಜನರನ್ನು ಗೆದ್ದು ಜಗವನ್ನೇ ಗೆಲ್ಲುತ್ತದೆ.



♥ ಕೃಷ್ಣ ಮತ್ತು ವೈಷ್ಣವಿ ದಂಪತಿ ಆರನೇ ವರ್ಷದ ವಿವಾಹ ವಾರ್ಷಿಕೋತ್ಸವವನ್ನು ಆಚರಿಸಿಕೊಂಡರು.

♥ ಎಂಟನೇ ವರ್ಷದ ವಿವಾಹ ವಾರ್ಷಿಕೋತ್ಸವದ ಸಂಭ್ರಮದಲ್ಲಿ ರಾಜಶೇಖರ ಮತ್ತು ವಾಣಿ ದಂಪತಿ.

ಮನೋನ್ಮಾದ

ಕಾವ್ಯ ಕಂಕಣ

● **ಶ್ರೀಶೈಲ ಹುಲ್ಲೂರು** ಜಮಖಂಡಿ

ಉಸಿರ ಬಸಿರ ಭಾವದಲ್ಲಿ
ಬಿಸಿಯ ಹಗಲ ತುಂಬಿ ತೇಗಿ
ಇರುಳ ಹೊರಳುವಾಟದಲ್ಲಿ
ಕೌಮುದಿಯ ಕೌದಿ ಹೊದ್ದು
ಒದ್ದು ಬರುವ ನಿದ್ದೆ ಸರಿಸಿ
ಮುದ್ದು ಮಾಡಿದೆ
ಅತರಂಗದೊಡಲ ಬೇಗೆ
ನಿರಂತರದೆ ಹರಿದು ಸರಿದು
ಮುರಿದುಕೊಳುವ ಮುದವನಪ್ಪಿ
ರಾಗರಸದ ಕಡಲು ಉಕ್ಕಿ
ಏರುವಲೆಯ ನೆಕ್ಕಿ ಮುಕ್ಕಿ
ಸಂಚು ಹೂಡಿದೆ
ಪವಡಿಸುವ ಕನಸಗಂಬ
ನೇಣು ಬಿಗಿವ ಮುನ್ನ ಎದ್ದು
ಕಣ್ಣು ಉಜ್ಜಿ ಲಜ್ಜೆಯುಟ್ಟು
ಮೆಟ್ಟಲಿಳಿದು ಗಟ್ಟಿಯಾಗಿ
ಪಾದವಿಟ್ಟ ತಿಟ್ಟನೆಲ್ಲ
ಮೆಟ್ಟಿ ನಲಿದಿದೆ
ಬೀಸಿ ಬರುವ ಮನಸ ಪವನ
ಮೂಸುಗಲ್ಲ ಒತ್ತಿ ಮುತ್ತಿ
ಸೂಸುತಿರುವ ಸುಧೆಯುಗುಂಟ
ಹಾಸು ಬಂಡೆ ಸವರಿ ಬೆವರಿ
ನವಿರುಗೊಡವ ಪಾನಗೈದು
ಬೆವರುಗೂಡಿದೆ

ಮದುವೆಗೆ ಜಾತಕವೇಕೆ?

● **ಶಂಕರ ನವಲೆ, ಮಧುಗಿರಿ**

ಮದುವೆಯ ಬಗ್ಗೆ ಅಷ್ಟಾಗಿ ಆಸಕ್ತಿ ಹೊಂದಿರದ ನಾನು ಮನೆಯವರ ಹುಸಿ ಬೆದರಿಕೆಗೆ ಹೆದರಿ ಕಾಟಾಚಾರಕ್ಕೆ ನಿಮ್ಮೂರಿಗೆ ಸಕುಟುಂಬ ಸಮೇತ ಬಂದು ನಿಮ್ಮನೇಲಿ ಕುಳಿತಿದ್ದೆ. ಅನಾದಿ ಕಾಲದಿಂದ ನಡೆದು ಬಂದ ಸಂಪ್ರದಾಯದಂತೆ ಕೈಯಲ್ಲೊಂದು ಟ್ರೇ, ಅದರಲ್ಲಿ ಮೋಸಂಬಿ ರಸ ತುಂಬಿದ ಗಾಜಿನ ಲೋಟ ಹಿಡಿದು ನಾಜೂಕಿನಿಂದ ಹೆಜ್ಜೆ ಇಡುತ್ತಾ ನೀನು ಬಂದೆ. ನಿನ್ನ ಮೊದಲ ಬಾರಿ ನೋಡಿದ ಕೂಡಲೇ ಮದು ವೆ ಬಗ್ಗೆ ಇದ್ದ ಎಲ್ಲ ತಾತ್ಸಾರಗಳು ತಲೆಕೆಳಗಾಗಿ ಹೃದಯ ಒಂದು ಕ್ಷಣ ನಿಂತು ಹೋಯಿತು.

ಗಿಳಿಹಸಿರು ಬಣ್ಣದ ಸೀರೆಯುಟ್ಟು, ಸಹಜವಾಗಿ ಕಾಣುತ್ತಿದ್ದ ನಿನ್ನ ಮುದ್ದಾದ ವದನ ಮತ್ತು ಯಾವುದೇ ಆಭರಣಗಳಿಲ್ಲದೆ ಅಂದವಾಗಿ ಕಾಣುತ್ತಿದ್ದ, ನಿನ್ನ ಸರಳ ಸಹಜ ಸೌಂದರ್ಯಕ್ಕೆ ಆ ಕ್ಷಣವೇ ಮಾರು ಹೋಗಿದ್ದೆ. ನಕ್ಕಾಗ ಮೂಡುತ್ತಿದ್ದ ಗುಳಿಕೆನ್ನೆಗೆ ಮನಸೋಲದವರುಂಟೆ ಎಂದೆನಿಸಿದ್ದು ಸುಳ್ಳಲ್ಲ. ಹಿರಿಯರಿಗೆಲ್ಲಾ ಮೋಸಂಬಿ ಜ್ಯೂಸ್ ನೀಡಿ ಕೊನೆಗೆ ನನ್ನ ಬಳಿ ಬಂದು ಜ್ಯೂಸ್ ತಗೊಳ್ಳಿ, ಎಂದು ನಾಚುತ್ತಾ ನುಡಿದ ನಿನ್ನ ಮಧುರ ಧ್ವನಿಗೆ ಮರುಳಾಗದೆ ಬೇರೆ ವಿಧಿಯೇ ಇರಲಿಲ್ಲ. ಆಧುನಿಕ ಯುಗದ ವಾಡಿಕೆಯಂತೆ ಪರಸ್ಪರ ಮಾತನಾಡಲು ಇಬ್ಬರಿಗೂ ಹೇಳಿದಾಗ ನಿನ್ನಲ್ಲಿದ್ದ ನಾಚಿಕೆ, ಆತಂಕ ನೋಡಿ ನಾನು ಒಳಗೆ ನಕ್ಕಿದ್ದೆ. ಯಾಕೆ ಗೊತ್ತಾ? ಹೆಚ್ಚೂ ಕಡಿಮೆ ನಾನೂ ನಿನ್ನ ಸ್ಥಿತಿಯಲ್ಲೇ ಇದ್ದೆ. ಝುಲ್ ಝುಲ್ ಗೆಜ್ಜೆನಾದದೊಂದಿಗೆ ಒಂದೊಂದೇ ಮೆಟ್ಟಿಲೇರುತ್ತಾ ನಿನ್ನ ಹಿಂದೆ ಸಮ್ಮೋಹನಕ್ಕೆ ಒಳಗಾದವನಂತೆ ಹಿಂಬಾಲಿಸುತ್ತಿದ್ದೆ. ಹುಡುಗಿಯರೊಂದಿಗೆ ಸಲುಗೆಯಿಂದ ಮಾತನಾಡಿ ಅಭ್ಯಾಸವಿಲ್ಲದ ನಾನು ಏನು ಮಾತಾಡಬೇಕೆಂದು ಲೆಕ್ಕಹಾಕುತ್ತಿರುವಾಗ, ಮೆಲುದನಿಯಲ್ಲಿ ನಿಮ್ಮ ಹೆಸರೇನು ಎಂದು ನೀನು ಕೇಳಿ ಮೌನ ಮುರಿದಿದ್ದೆ. ಇಬ್ಬರ ಹೆಸರು ಮೊದಲೆ ತಿಳಿದಿತ್ತಾದರೂ ಮಾತು ಆರಂಭಿಸಲು ಕಾರಣ ಬೇಕಿತ್ತು.

ಹೀಗೆ ಮುಗಿದ ನಮ್ಮ ಮೊದಲ ಭೇಟಿ ಮೊಬೈಲ್‌ನಲ್ಲಿ ಮುಂದುವರಿಯಿತು. ನಾವಿಬ್ಬರೂ ಒಬ್ಬರನ್ನೊಬ್ಬರು ಮೆಚ್ಚಿಕೊಳ್ಳಲು ಮತ್ತೊಂದು ಕಾರಣ ಇಬ್ಬರಲ್ಲೂ ಇರುವ ಒಂದೇ ಅಭಿರುಚಿಗಳು, ಆದರ್ಶಗಳು ಇತ್ಯಾದಿ. ಎರಡು ಮನಸುಗಳು ಬೆರೆತು ಒಂದಾಗಿ ಬಾಳಲು ಇದಕ್ಕಿಂತ ಹೆಚ್ಚಿನ ಅರ್ಹತೆಗಳು ಇನ್ನೇನು ಬೇಕು. ಆ ದೇವರೇ ನಮ್ಮನ್ನು ಬೆಸುಗೆ ಹಾಕಿದ್ದಾನೆಂದು ನಂಬಿ ನಮ್ಮಿಬ್ಬರ ಪ್ರೀತಿಯ ಸೇತುವೆ ಮೇಲೆ ಜೋಡಿ ಪ್ರಯಾಣ ಶುರುವಾಗಬೇಕಿತ್ತು.

ಆದರೆ ಬರ ಸಿಡಿಲು ಬಡಿದಂತೆ ನಮ್ಮಿಬ್ಬರ ನಡುವೆ ಜಾತಕ ಎಂಬುದು ಬಂದು ನಿಂತಿತ್ತು. ಈ ಮದುವೆಗೆ ಜಾತಕ ಏಕೆ ಬೇಕು, ಗುಣಗಳು ಹೊಂದಿದ ಹೊರತಾಗಿಯೂ ಜಾತಕ ಸರಿ ಇದ್ದರೂ ಎಷ್ಟೋ ಮದುವೆಗಳು ಮುರಿದು ಬಿದ್ದಿಲ್ಲವೆ. ಇದೆಲ್ಲಾ ತಿಳಿದಿದ್ದರೂ ನಮ್ಮ ಜನರು ಇನ್ನೂ ಮೂಢನಂಬಿಕೆಗಳನ್ನು ನಂಬುವುದು ಏಕೆ. ನಾವು ಮನೆಯವರಿಗೆ ಇದನ್ನೆಲ್ಲಾ ಅರ್ಥೈಸಿ ಒಪ್ಪಿಸಲು ಪ್ರಯತ್ನಿಸೋಣ. ಒಪ್ಪಿಗೆ ಸೂಚಿಸುತ್ತಾರೆಂಬ ನಂಬಿಕೆ ನನಗಿದೆ. ಅವರು ಒಪ್ಪದಿದ್ದರೆ ಸಿದ್ಧ ಸೂತ್ರ ಇದ್ದೇ ಇದೆಯಲ್ಲ ಪ್ರೀತಿ ಮಾಡಬಾರದು ಮಾಡಿದರೆ ಜಗಕ್ಕೆ ಹೆದರಬಾರದು. ಎಂಬ ನೀತಿಯನ್ನು ಪಾಲಿಸೋಣ.



ನೀವೂ ಬರೆಯಿರಿ 'ವಿವಾಹ್!'ಗೆ

(1) ನಿಮ್ಮ ಮದುವೆಯ ಹಿನ್ನೆಲೆ, ಪರಸ್ಪರ ಆಯ್ಕೆಯಾದ ಪ್ರಕ್ರಿಯೆ, ಲವ್ ಮಾಡಿದ್ದರೆ ಆ ಕಥನ, ತಮಾಷೆ, ಸಂಭ್ರಮವನ್ನು ನಮ್ಮೊಂದಿಗೆ ಹಂಚಿಕೊಳ್ಳಿ. ಹಳೆಯ ನೆನಪಾದರೂ ಪರವಾಗಿಲ್ಲ. (2) ನಿಮ್ಮ, ಕುಟುಂಬದವರ, ಸಂಬಂಧಿಕರ ಮದುವೆ, ವಾರ್ಷಿಕೋತ್ಸವದ ಫೋಟೊ, ಹೆಸರು, ಊರು ಮೊದಲಾದ ವಿವರದೊಂದಿಗೆ ನಮಗೆ ಕಳುಹಿಸಿ.

ನಮ್ಮ ಈ-ಮೇಲ್:
vishwavanimagazine@gmail.com